ಸ್ರ 1884ನೇ ಇಸವಿ ಅರ್ಜೀ ನಂಬರ್ 266.

ಮೃತಪಟ್ಟ ಕುಂಬೂರ ಚಿಂತಿ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಡಿಟೋಯವನ ಮಗನಾದ ವೆಂಕಟಸಾಮಿ, ಮೃತಪಟ್ಟ ಸದರೀ ಕುಂಬೂರ ಚಿಂತಿ ರಾಮಯ್ಯನಿಗೆ ಮಗನು ಆಗಬೇಕೆಂ. ಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಪಡವಾರಹಳ್ಳಿ ಸ್ಥಳದ ವೆಂಕಟಸಾಮಯ್ಯ ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ರ್ನಾ ಮಯ್ಯನ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇ ರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕಟಸಾಮಯ್ಯನ ಅರ್ಜೀಯನ್ನು 1884ನೇ ಇಸವಿ ಆಗಸ್ಟ್ ತಿಂಗಳು ತಾರೀಖು 29ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಬೂರ ಚಿಂತಿ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 296.

ಮೃತಪಟ್ಟ ಶಿವಾಚಾರದ ಮಾರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೆದಾರಳಾದ ಡಿಟೋಯವನ ಹೆಂಡತಿ ಬಸಮ್ಮನು, ಮೃತಪಟ್ಟ ಸದರೀ ಮಾರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಗುಂಡ್ಲು ತಾ॥ ತೆರಕಣಾಂಬಿ ಹೋಬಳಿ ಬೊಮ್ಮನಹಳ್ಳಿ ಸ್ಥಳದ ಬಸಮ್ಮನು ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟಮಾರಯ್ಯನ ಜೆಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇ ರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಸಮ್ಮನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಮೈಸೂರು ಮೊಕ್ಕಾಂ ಈಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಮಾರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಜುಲೈ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ನಂ. 6. ತಾರೀಖು 4ನೇ ಆಗಸ್ಟು 1884.

ಇದರಿಂದ ತಿಳಿಯಪಡಿಸುವದೇನಂದರೆ, ಹೊಳೇನರಸೀಪುರದ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸುಗಿಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲೀ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೇ ಯಾಗಲೀ ಈ ನೋಟೀಸ್ ತಾರೀಖು ಲಗಾಯತು ವಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಣ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರು		ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
39.	1881—82	ನರಸೀಪುರದ ತಾಲ್ಲೂಕು ಸೂರನಹಳ್ಳಿ ಗ್ರಾಮದಲ್ಲಿರುವ ಸ್ವರ್ತ ಬ್ರಾಹ್ಮಣ ಕೇಶವಯ್ಯನ ಹೆಂಡತಿ ಜೀವಾಯಿತು ಜೀವನದ ನರಸಮ್ಮ	ಲೇಟ್ ಅರಕಲ್‌ಗೂಡು ತಾಲ್ಲೂಕು ಗುಬ್ಬಿ ವಾಸಸ್ಥ ಸ್ವರ್ತ ಬ್ರಾಹ್ಮಣ ಗೋಣಿಬೀಡು ಸುಬ್ಬಾ ಭಟ್ಟರ ಮಗ ವೈದೀಕ ವೃತ್ತಿ ಜೀವನದ ನಂಜಪ್ಪ.	27—7—82	27—7—82	1,183—0—10ರೂಪಾಯಿನ ಜಮೀರ್ನಾ ಕ್ರಯಪತ್ರ.

ತಾರೀಖು 24ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರ್ಮುಕೂಡ್ಲು ನರಸೀಪುರ ಮತ್ತು ಮೈಸೂರು ಸಬ್‌ರಿಜಿಸ್ಟ್ರೀ ಆಫೀಸ್‌ಗಳಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜುಗಳನ್ನು ಹಾಜರ್ಮಾಡಿದವರೇ ಬಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರ್ರೆ ಆಗಲೀ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳನ್ನು ನಾಶ ಪಡಿಸಲ್ಪಡುವವು.

ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
118 ——— 1882—83	ಮೈಸೂರು ಕಿಲ್ಲೇಯಲ್ಲಿರುವ ಕೊಳತೂರು ಲಿಂಗಾಪಂತರ ಹೆಂಡತಿ ಪುಟ್ಟಮ್ಮಣ್ಣಮ್ಮ	ತಲ್ಕಾಡು ತಾಲ್ಲೂಕು ಸಾಲಿಮಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಫಕೀರ್ ಅಹಮ್ಮದ್‌ಸಾಬರ ಮಗ ಚಿಕ್ಕ ಯಿನಾಂಸಾಬಿ	1—5—82	1—5—82	10 ರೂಪಾಯಿನ ಕ್ರಯಪತ್ರ.
151 ——— 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಪಿಳ್ಳಹಳ್ಳಿಯಲ್ಲಿರುವ ಅಂಜೇಗೌಡನ ಮಗ 1ನೇ ಪುಟ್ಟಣ್ಣ 2ನೇ ಭೈರಣ್ಣ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಜೋಡೀ ಅಗ್ರಹಾರದಲ್ಲಿರುವ ವೇಂದಾಬಾರ ಮಕ್ಕಳು ಶ್ರೀನಿವಾಸಾಚಾರ್	9—5—82	9—5—82	14—4—0 ರೂಪಾಯಿನ ಗುತ್ತಿನ ದಸ್ತಾವೇಜು.
157 ——— 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಬಲಗೈಜಾತಿ ಚಿಕ್ಕಚೆದ್ದನ ಮಗ ಕುಳ್ಳಮಾದ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಚಿದರವಳ್ಳಿಯಲ್ಲಿರುವ ಮಾದಪಟ್ಟಿಮಗ ವೆಂಕಟಪಟ್ಟಿ	11—1—82	11—5—82	95 ರೂಪಾಯಿನ ಭೋಗ್ಯಪತ್ರ.
282 ——— 1882—83	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ಸ್ಮಾರ್ತ ಬ್ರಾಹ್ಮಣ ಕಿತ್ತೂರು ಸುಬ್ಬಯ್ಯನ ಹೆಂಡತಿ ಲಕ್ಷ್ಮಮ್ಮ	ತಿರ್ಮುಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕೆಬೀ ಬರಾವ್	13—6—82	13—6—82	100 ರೂಪಾಯಿನ ಅಧಾರ ಪತ್ರ.
635 ——— 1881—82	ಮೈಸೂರು ಯಿಟ್ಟಿಗೆ ಗೂಡಿನಲ್ಲಿ ಯಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಂಚಾಳ ಜಾತಿ ಕಾತಮೇಸ್ತ್ರಿ ಮಗ ಚಾಮುಂಡಾಚಾರಿ 1 ನಾರಣಾಚಾರಿ 1 ಲಕ್ಷ್ಮಣಾಚಾರಿ 1	20—1—82	23—1—82	90 ರೂಪಾಯಿನ ವಿಭಾಗ ಪತ್ರ.
556 ——— ಡಿಟೋ.	ಮೈಸೂರು ಬಸವನ ಮಹಲೀಲಿರುವ ಶಿವಾಚಾರದ ವ್ಯಾಪಾರದ ಜೀವನದ ಯನಾರು ಹೊರಯ್ಯನಮಗ ಪುಟ್ಟಣ್ಣ	ಮೈಸೂರು ಬಸವನಮಹಲೀಲಿರುವ ಅಕ್ಕಸಾಲೆ ಜಾತಿ ಸೊಕಸಬು ಚನ್ನೀರಪ್ಪನ ಮಗ ವೀರಣ್ಣ	15—12—81	17—12—81	150 ರೂಪಾಯಿನ ಭೋಗ್ಯ ಪತ್ರ.
475 ——— ಡಿಟೋ	ಮೈಸೂರು ಬಸವನ ಮಹಲೀ ಯಿರುವ ಮುಸಲ್ಮಾನ್ ಚೌದ್ರಿ ಲಾಲಾಮಿಯ್ಯನ ಮಗ ಮಹಮ್ಮದ್ ಖಾಸಿಂಸಾಬಿ	ಮೈಸೂರುನಲ್ಲಿ ಯಿರುವ ದೇವದ ಯಜಮಾನ್ ವೀರಣಾಚಟ್ಟಿರ ಮಗ ರುದ್ರಶಟ್ಟಿ ಶಿವಾಚಾರಿ ಜಾತಿ	29—8—81	21—11—81	ಮಾಹೆ 1ಕ್ಕೆ 8 ರೂಪಾಯಿ ಕೊಡತಕ್ಕ ಅಂಗಡಿಬಾಡಿಗೆ ಕರಾರು.

ಅಬ್ದುಲ್‌ಖಾದರ್, ಕೆ. ಬಿ., ರಿಜಿಸ್ಟ್ರಾರ್.